

ಇಟಲಿ ಮೂಲದ ಫ್ರಾನ್ಸಿಸ್ಕಾ ಕೋಸಾ ಮಕ್ಕಳಾದ ಜಾರ್ಜಿಯಾ ಮತ್ತು ವಿರ್ಜಿನಿಯಾ ಅವರೊಂದಿಗೆ

# 'ಇಲ್ಲಿನ ಶಿಕ್ಷಣ ಪದ್ಧತಿ ನಮಗಿಷ್ಟ'

ವಿದೇಶಗಳಿಂದ ಬಂದವರಿಗೆ ಇಲ್ಲಿನ ಆಹಾರ ಕ್ರಮ, ಶಿಕ್ಷಣ, ಉದ್ಯಮಶೀಲತೆ, ಪ್ರವಾಸೋದ್ಯಮ ಎಲ್ಲವೂ ವಿಶಿಷ್ಟ ಅನುಭವಗಳನ್ನು ನೀಡುತ್ತಿವೆ. ಹೀಗಾಗಿ ಭಾರತಕ್ಕೆ ಅದರಲ್ಲೂ ಬೆಂಗಳೂರಿಗೆ ಬಂದು ನೆಲೆ ನಿಂತ ವಿದೇಶೀಯರು (ಎಕ್ಸ್‌ಪಾಟ್ಸ್) ತಮ್ಮ ಸ್ವಂತ ಊರಿಗಿಂತಲೂ ಹೆಚ್ಚಾಗಿ ಇಲ್ಲಿನ ವೈವಿಧ್ಯಗಳನ್ನು ಇಷ್ಟಪಡುತ್ತಾರೆ. ಇಲ್ಲಿಯೇ ಖಾಯಂ ವಾಸಿಯಾಗಲು ತವಕ ಪಡುತ್ತಾರೆ. ಇದಕ್ಕೆ ಕಾರಣ ಇಲ್ಲಿನ ವೈವಿಧ್ಯತೆ. ಇದನ್ನೇ ಸ್ವತಃ ವಿದೇಶೀಯರೇ ವರ್ಣಿಸುತ್ತಾರೆ.

ಹಾಗೆ ಬಂದವರಲ್ಲಿ ಒಬ್ಬರು ಇಟಲಿ ಮೂಲದ ಮಹಿಳೆ ಫ್ರಾನ್ಸಿಸ್ಕಾ ಕೋಸಾ. ಪತಿ ಪೀಟರ್ ಮತ್ತು ಮಕ್ಕಳಾದ ವಿರ್ಜಿನಿಯಾ ಮತ್ತು ಜಾರ್ಜಿಯಾ ಅವರೊಂದಿಗೆ ಫ್ರಾನ್ಸಿಸ್ಕಾ ಕೋಸಾ ಐದು ವರ್ಷಗಳ ಹಿಂದೆ ಇಟಲಿಯಿಂದ ಬೆಂಗಳೂರಿಗೆ ಬಂದವರು. ಪೀಟರ್ ಟೆಕ್ಸ್‌ಟೈಲ್ ಉದ್ಯಮಿ. ಸ್ವಂತ ಉದ್ಯಮ ನಡೆಸುತ್ತಾರೆ. ಫ್ರಾನ್ಸಿಸ್ಕಾ ಶಿಕ್ಷಣ ಸಂಸ್ಥೆಯೊಂದರಲ್ಲಿ ಮಾರ್ಕೆಟಿಂಗ್ ಕನ್ಸಲ್‌ಟೆಂಟ್. ಭಾರತದಲ್ಲಿ ಅದರಲ್ಲೂ ಬೆಂಗಳೂರಿನಲ್ಲಿ ಕೆಲಸ ಮಾಡುವುದು ಇವರಿಗೆ ಉತ್ತಮ ಅನುಭವ ನೀಡಿದೆಯಂತೆ. ಅಲ್ಲದೆ ಇಲ್ಲಿನ ವಾತಾವರಣಕ್ಕೆ ಚೆನ್ನಾಗಿ ಹೊಂದಿಕೊಂಡಿದ್ದಾರಂತೆ.

'ನಾವು ಇಟಲಿ ಬಿಟ್ಟು ಬರುವ ಯೋಚನೆಯೇ ಇರಲಿಲ್ಲ. ಸುಮಾರು ಐದು ವರ್ಷಗಳ ಹಿಂದೆ ಇಟಲಿಯಲ್ಲಿ ಆರ್ಥಿಕ ಸಂಕಷ್ಟ (ಹಣದುಬ್ಬರ) ಉಂಟಾಗಿತ್ತು. ಆಗ ದುಡಿಮೆಗೆ, ಜೀವನ ನಿರ್ವಹಣೆಗೆ ಬಹಳ ಕಷ್ಟವಾಗಿತ್ತು. ಆ ಸಮಯದಲ್ಲಿ ಬೆಂಗಳೂರಿಗೆ ಬರುವ ನಿರ್ಧಾರ ಕೈಗೊಂಡು ಇಲ್ಲಿಯೇ ಹೊಸದಾಗಿ ವಸ್ತ್ರೋದ್ಯಮ ಆರಂಭಿಸಿದೆವು. ಇದೀಗ ಆರ್ಥಿಕವಾಗಿ ಸದೃಢರಾಗಿದ್ದೇವೆ. ಇಲ್ಲಿ ಉತ್ತಮ ಔದ್ಯೋಗಿಕ ವಾತಾವರಣವಿದೆ' ಎನ್ನುತ್ತಾರೆ ಫ್ರಾನ್ಸಿಸ್ಕಾ.

'ಪತಿ ಉದ್ಯಮ ಆರಂಭಿಸಿ ಒಂದೆರಡು ವರ್ಷಗಳ ಬಳಿಕ ಶಿಕ್ಷಣ ಸಂಸ್ಥೆಯೊಂದರಲ್ಲಿ ನೌಕರಿಗೆ ಸೇರಿದೆ. ಇದೀಗ ಕೆಲಸ ತೃಪ್ತಿ ಕೊಟ್ಟಿದೆ' ಎಂದೂ ಹೇಳುತ್ತಾರೆ ಈ ಮಹಿಳೆ.

'ಇಟಲಿಯಲ್ಲಿ ಕೆಲಸ ವಾತಾವರಣಕ್ಕೂ ಇಲ್ಲಿಗೂ ಬಹಳ ವ್ಯತ್ಯಾಸವಿದೆ. ಅಲ್ಲಿ ನಮಗೆ ಬೇಕಾದ ಕೆಲಸ ನಾವೇ ಮಾಡಬೇಕು. ಉದಾಹರಣೆಗೆ; ಯಾವುದಾದರೂ ದಾಖಲೆಯ ನಕಲು ಪ್ರತಿ ಬೇಕು ಎಂದಾದರೆ ಇಲ್ಲಿ ನಾವು ಬೇರೆಯವರಿಗೆ ಅಥವಾ ಕೆಳಸ್ತರದ ನೌಕರರಿಗೆ ಕೊಡುತ್ತೇವೆ. ಆದರೆ ಇಟಲಿಯಲ್ಲಿ ಜೆರಾಕ್ಸ್ ಬೇಕಿದ್ದರೂ ನಾವೇ ತೆಗೆದುಕೊಳ್ಳಬೇಕು. ಯಾರೂ ನಮ್ಮ ಸಹಾಯಕ್ಕೆ ಬರುವುದಿಲ್ಲ. ಇದೇ ರೀತಿ ಇಲ್ಲಿ ಸಹೋದ್ಯೋಗಿಗಳ ಮಧ್ಯೆ ಸೌಹಾರ್ದಯುತ ವಾತಾವರಣವಿದೆ. ಇಲ್ಲಿನ ಕೆಲಸದ ವಿಧಾನಕ್ಕೂ ಅಲ್ಲಿಗೂ ಹಲವು ವ್ಯತ್ಯಾಸಗಳನ್ನು ನಾನು ಗುರುತಿಸಿದ್ದೇನೆ. ಇಟಲಿಯಲ್ಲಿ ನಮ್ಮ ಕೆಲಸ ನಾವೇ ಮಾಡುವುದರಿಂದ ಆಗುವ ಲಾಭವೆಂದರೆ ಸಮಯದ ಉಳಿತಾಯ. ಇಲ್ಲಿ ಒಂದು ಸಣ್ಣ ಕೆಲಸ ಮಾಡಿಸಬೇಕೆಂದರೂ ತುಂಬ ಸಮಯ ವ್ಯರ್ಥವಾಗುತ್ತದೆ' ಎನ್ನುತ್ತಾರೆ ಫ್ರಾನ್ಸಿಸ್ಕಾ.

## ಸ್ನೇಹಪರರು

'ಬೆಂಗಳೂರಿನ ಜನ ವಿಶಾಲ ಮನೋಭಾವದವರು. ಇಟಲಿಯಂತೆ ಇಲ್ಲಿನ ಜನರೂ ಬೇಗ ಸ್ನೇಹಿತರಾಗುತ್ತಾರೆ. ಸಹೋದ್ಯೋಗಿಗಳೊಂದಿಗೆ ಬೆರೆಯುತ್ತಾರೆ. ನಾವೂ ಕಚೇರಿಯಲ್ಲಿ ಪ್ರೀತಿಯಿಂದ ಮಾತನಾಡುತ್ತೇವೆ, ಜೋಕ್ಸ್ ಹೇಳಿಕೊಂಡು ನಗುತ್ತೇವೆ. ಒಟ್ಟನಲ್ಲಿ ಇಲ್ಲಿ ನಾವು ಚೆನ್ನಾಗಿ ಹೊಂದಿಕೊಂಡಿದ್ದೇವೆ. ಇಲ್ಲಿನ ಊಟ ತಿಂಡಿಗಳಂತೂ ವೈವಿಧ್ಯಮಯ. ಬಗೆಬಗೆಯ ಹೋಟೆಲ್‌ಗಳಲ್ಲಿ ವಿಧವಿಧವಾದ ತಿಂಡಿಗಳನ್ನು ರುಚಿ ನೋಡುವುದೇ ಒಂದು ರೀತಿಯ ಮಜಾ. ಮಲ್ಟಿ ಕುಸನ್ ರೆಸ್ಟೋರೆಂಟ್‌ಗಳಲ್ಲಿ ಊಟ ಮಾಡುವುದು ಒಂದು ಖುಷಿಯ ಅನುಭವ. ಪ್ರವಾಸೀ ತಾಣಗಳೂ ಅದ್ಭುತ. ಗೋವಾ, ರಾಜಸ್ತಾನ, ಕೇರಳ, ಹೈದರಾಬಾದ್, ಮುಂಬಯಿ, ದೆಹಲಿಗಳಲ್ಲಿ ಪ್ರವಾಸ ಮಾಡಿದ್ದೇವೆ. ಎಲ್ಲ ಪ್ರೇಕ್ಷಣೀಯ ಸ್ಥಳಗಳೂ ರೋಮಾಂಚಕ ಅನುಭವ ನೀಡಿದೆ. ಆದರೆ ದೇಶದ ಬೇರೆ ಪ್ರವಾಸಿ ತಾಣಗಳಿಗಿಂತ ಬೆಂಗಳೂರಿನ ಹವಾಮಾನ ಚೆನ್ನಾಗಿದೆ' ಎನ್ನುತ್ತಾರೆ ಫ್ರಾನ್ಸಿಸ್ಕಾ.

'ಮಕ್ಕಳಾದ ವಿರ್ಜಿನಿಯಾ ಮತ್ತು ಜಾರ್ಜಿಯಾ ಇಬ್ಬರೂ ಇಲ್ಲಿಗೆ ಚೆನ್ನಾಗಿ ಹೊಂದಿಕೊಂಡಿದ್ದಾರೆ. ಇಟಲಿಯ ಶಿಕ್ಷಣ ವ್ಯವಸ್ಥೆಗೂ ಇಲ್ಲಿಗೂ ಬಹಳ ವ್ಯತ್ಯಾಸವಿದೆ. ಇಟಲಿಯಲ್ಲಿ ಪ್ರಾಥಮಿಕ ಶಾಲೆ ಎಂಬ ಪರಿಕಲ್ಪನೆಯೇ ಇಲ್ಲ. ಆದರೆ ಇಲ್ಲಿ ಎಲಿಮೆಂಟರಿ, ಹೈಸ್ಕೂಲ್, ಕಾಲೇಜು ಎಂದು ಶಿಕ್ಷಣ ಹಂತಹಂತವಾಗಿ ಸಾಗುತ್ತದೆ. ಇಲ್ಲಿನ ಶಿಕ್ಷಣ ಪದ್ಧತಿಯೇ ನಮಗಿಷ್ಟ. ಮಕ್ಕಳಿಗೂ ಶಾಲೆಯ ವಾತಾವರಣ ಇಷ್ಟವಾಗುತ್ತಿದೆ. ಈಗಾಗಲೇ ಹಲವಾರು ಸ್ನೇಹಿತರನ್ನೂ ಮಕ್ಕಳು ಹೊಂದಿದ್ದಾರೆ. ಅಲ್ಲದೆ ಇಲ್ಲಿನ ಶಾಲೆಗಳಲ್ಲಿ ಪಠ್ಯವಲ್ಲದೆ ಇತರ ಚಟುವಟಿಕೆಗಳಿಗೂ ಆದ್ಯತೆ ಸಿಗುತ್ತಿದೆ. ಸಂಗೀತ, ನಾಟಕ ಕಲೆ, ಯೋಗ, ಕರಾಟೆ, ಸ್ಕೇಟಿಂಗ್, ಅಬಾಕಸ್, ಕ್ರಿಕೆಟ್ ಮುಂತಾದ ಚಟುವಟಿಕೆಗಳು ಮಕ್ಕಳ ಬೌದ್ಧಿಕ ವಿಕಸನಕ್ಕೆ ಸಹಕಾರಿಯಾಗಿವೆ. ಇದು ಮಕ್ಕಳ ಸರ್ವತೋಮುಖ ಬೆಳವಣಿಗೆಗೂ ಅನುಕೂಲಕರವಾಗಿರುತ್ತದೆ. ಜೀವನದಲ್ಲಿ ಸ್ಪರ್ಧಾತ್ಮಕ ಮನೋಭಾವನೆ ಬೆಳೆಸಿಕೊಳ್ಳಲೂ ಇದರಿಂದ ಸಾಧ್ಯವಾಗುತ್ತದೆ' ಎಂದು ಇಲ್ಲಿನ ಶಿಕ್ಷಣ ವ್ಯವಸ್ಥೆಯ ಬಗ್ಗೆ ತಮ್ಮದೇ ಆದ ವ್ಯಾಖ್ಯಾನ ನೀಡುತ್ತಾರೆ ಅವರು.

★ ಅವನೀಶ್